Regd No B G 155

Sri

19—5—1965

ಸತ್ಯವಾದಿ

48th Year
Satyavadi
DAILY
MYSORE 4

ಹೀಗಿತ್ತು ಇದೀಗ

ವಾಷಿಂಗ್ಟನ್— ಚೀನಾ ಒಂದು ಪರಮಾಣು ಶಕ್ತಿಯಾಗಿದೆ : ಇನ್ನು ಐದಾರು ವರ್ಷಗಳಲ್ಲಿ ಹೆಚ್ಚು ಮುಂದುವರಿದು ಪರಿಮಿತಿಯ ಪ್ರಮಾಣದಲ್ಲಿ ಅದನ್ನು ಹೊಂದಿ, ಜಪಾನು, ಫಿಲಿಪೈನ್ಸ್, ಮಧ್ಯ ದಕ್ಷಿಣ ಮತ್ತು ಆಗ್ನೇಯ ಏಷ್ಯಾ ಮತ್ತು ಪೆಸಿಫಿಕ್ ಸಾಗರವನ್ನೂ ತಲಪಿಸುವ ಶಕ್ತಿಗೆ ಅಸ್ಪದವಿದೆ ; ಅಗಂಥ್ಯವು ಚೀನಾದೊಡನೆ ಸವರಿಸಿಕೊಳ್ಳಬೇಕು ಅಥವಾ ಪಾಶ್ಚಾತ್ಯ ಶಕ್ತಿಗಳ ರಕ್ಷಣಾ ಸೇವನ್ನು ಪಡೆಯಬೇಕು ಎಂದು ಒಂದು ಕಾಂಗ್ರೆಸು ಉಪ ಸಮಿತಿ ವಂದಿ ಪ್ರಕಟಿಸಿದೆ

★

ದುರಂತ

ಹೈದರಾಬಾದು— ಗುಂಟೂರು ಜಿಲ್ಲೆಯ ಪೊನ್ನೂರಿನಲ್ಲಿನ ಭಾವನಾರಾಯಣಸ್ವಾಮಿ ದೇವಾಲಯದ ರಥವನ್ನೆಳೆಯುತ್ತಿದ್ದಾಗ ಇಬರು ಕಾಲುಜಾರಿ ಬಿದ್ದ ಅವರ ಮೇಲೆ ರಥ ಹರಿದಿದ್ದರಿಂದ ಒಬ್ಬ ಸತ್ತು ಮತ್ತೊಬ್ಬ ತೀವ್ರ ಗಾಯಗೊಂಡನು

ಆತ್ಮಹತ್ಯೆ

ನವದೆಹಲಿ— ಕಚ್ಛ್-ಸಿಂಧ್ ಗಡಿಯಲ್ಲಿ ಕದನಸ್ತಂಭಕ್ಕೆ ಸ್ಥಾನಗಳು ಹಿಂದಿದ್ದಂತೆ ಇಂಬೇಕೆಂಬ ವಿಷಯದಲ್ಲಿ ಪ್ರಾಟಸ್ಥಾನ ವಿವಾದವು ಭಾರತಕ್ಕೆ ಆತ್ಮಹತ್ಯೆ ಉಂಟುಮಾಡಿದೆ

★

ರಷ್ಯದ ಬೆಂಬಲ

ರಾಣ್‌ನಲ್ಲಿ ಹಿಂದಿದ್ದ ಸ್ಥಾನಗಳ ರೀತಿಯ ವ್ಯವಸ್ಥೆ ಬಗ್ಗೆ ರಷ್ಯವು ಭಾರತಕ್ಕೆ ಭರವಸೆ ಕೊಟ್ಟಿದೆಯೆಂದೂ, ಇದು ಹತಾಗೆ ಮಾಡಲ್ಪಡದಿದ್ದರೆ ಆ ಪರಿಸ್ಥಿತಿ ಸೃಷ್ಟಿಸಿಗೆ ಎಲ್ಲ ಅವಶ್ಯ ಕಾರ್ಯಗಳನ್ನು ಸೈಗೊಳ್ಳುವ ಭರವಸೆ ಕೊಟ್ಟಿದೆಯೆಂದೂ ವಂದಿಯಾಗಿದೆ

★

ಅಮಾಯಂ ವಸ್ತುಪ್ರದರ್ಶನ

ಬೆಂಗಳೂರು— ರಾಜ್ಯದಲ್ಲಿನ ಕೈಗಾರಿಕಾ ಉತ್ಪಾದನೆಯ ಸಂಬಂಧದ ಪಾಯಂ ವಸ್ತುಪ್ರದರ್ಶನವೇರ್ಪಡಬೇಕೆಂದು ಗೌರ್ನರ್ ಗಿರಿಯವರು ಹೇಳಿದರು

★

ಪಾಕಿಸ್ತಾನದ ದಾಂಧಲೆ

ಜಮ್ಮು— ನಾಷಿಂಗ್ ಭಾಗದಲ್ಲಿ ಭಾರತ ಭೂಮಿಯೊಳಗೆ ನುಗ್ಗಿ ಪಾಕಿಸ್ತಾನಿ ಸೈನ್ಯವು ನಿರಾಯುಧ ಗ್ರಾಮಸ್ಥರಿಂ ವೇಲೆ ಗುಂಡಿನ ಮಳೆ ಸುರಿಸಿ ಕ್ರೌರ್ಯವನ್ನು ಕೊಂದು ಇಬ್ಬರಿಗೆ ಗಾಯಗೊಳಿಸಿತು.

ಬಸ್ಸು 300 ಅಡಿ ಕೆಳಗೆ ಬಿತ್ತು

ಬೊಗೋಟಾ— ಮೊನ್ನೆ ಒಂದು ಪ್ರಯಾಣಿಕರ ಬಸ್ಸು ಮುನ್ನೂರು ಅಡಿ ಕೆಳಗಿನ ಕೊಂಕಲಿಗೆ ಬಿದ್ದು 14 ಮಂದಿ ಸತ್ತು, ಕೆಲವರು ಗಾಯಗೊಂಡರು.

★

ಕೃಷ್ಯಾದ ಸಹಾಯ

ನವದೆಹಲಿ— ರಷ್ಯವು ಭಿಲಾಯಿ ಉಕ್ಕಿನ ಕಾರ್ಖಾನೆಯ ವಿಸ್ತರಣೆ ಸಹಾಯ ಮಾಡುವುದಲ್ಲದೆ, ಒಂದು ಎಣ್ಣೆ ಶುದ್ಧೀಕರಣ ಯಂತ್ರಾಗಾರ ಸ್ಥಾಪನೆಗೂ ನೆರವು ನೀಡಲಿದೆ ಎಂದು ವಂದಿಯಾಗಿದೆ.

ಸೇನೆ ಶೇಖರಣೆ

ಜಲಂಧರ— ಭಾರತ-ಪಾಕಿಸ್ತಾನದ ಅಂತರಾಷ್ಟ್ರೀಯ ಗಡಿಯಲ್ಲಿ ಪಾಕಿಸ್ತಾನದ ಕಡೆ ಸಶಸ್ತ್ರ ಪಡೆಗಳ ಶೇಖರಣೆ ದಂತಿದೆ — ಪಂಜಾಬ ಗಡಿಯಲ್ಲಿ ಪಾಕಿಸ್ತಾನ ಬ್ಯಾಗೇಡುಗಳಿವೆ ಎಂದು ವಂದಿಯಾಗಿದೆ.

16 ಸಾವಿರ ಕಾರ್ಮಿಕರು ಕೆಲಸಕ್ಕೆ ಹೋಗಲಿಲ್ಲ

ರಾಬರ್ಟ್‌ಸನ್‌ಪೇಟೆ— ಉತ್ಪನ್ನವಾದ ಅಕ್ಕಿ ಕೊಡಬೇಕೆಂದೂ, ಗಣಿ ಅಡಳಿತಗಾರರು ಕೇಳಿದ ಅಕ್ಕಿಗೆ ಕೊಟ್ಟು ಹೆಚ್ಚು ದರ ಪಡೆಯುತ್ತಿರುವುದನ್ನು ಪ್ರತಿಭಟಿಸಿ ಕೋಲಾರಚಿನ್ನದ ಗಣಿಯ 16 ಸಾವಿರ ಕಾರ್ಮಿಕರು ಮತ್ತಿತರ ನೌಕರರು ಕೆಲಸಕ್ಕೆ ಹೋಗಲಿಲ್ಲ.

★

ವಿಯೆಟ್ನಾಂ

ಸೈಗಾವ್— ದಕ್ಷಿಣ ವಿಯೆಟ್ನಾಂನಲ್ಲಿ ಅಮೇರಿಕಾ ಸೈನ್ಯ ಹೆಚ್ಚುತ್ತಲೇ ಇದೆ, 62 ರಲ್ಲಿ ಕೇವಲ 900 ಸೈನಿಕರಿದ್ದರು ; 63 ರಲ್ಲಿ 11 ಸಾವಿರಕ್ಕೆ ಹೆಚ್ಚಿದ್ದರು ಈಗ 55 ಸಾವಿರಕ್ಕೆ ಏರಿದೆ : ಅಮೇರಿಕಾ ನಿಶಸ್ತ್ರಾಣ ರಕ್ಷಣೆಗೆ ನೌಕಾಪಡೆಗಳು ಬಂದಿಳಿದಿವೆ — ವಿಯೆಟ್ನಾಮಿನ ಈ ವರ್ಷದ ಯುದ್ಧಕ್ಕೆ ಅಮೇರಿಕಾ ಅಧ್ಯಕ್ಷರು 700 ರಿಂದ 1500 ಮಿಲಿಯ ಡಾಲರು ಮಂಜೂರು ಮಾಡಿದ್ದಾರೆ ; ಪರಿಸ್ಥಿತಿಯು ಉತ್ತರ ವಿಯೆಟ್ನಾಂ ಚೀನಾ ರಕ್ಷಣೆಗಳ ಮೇಲೆ ಬಿದ್ದಿದ್ದರೂ, ಹೆಚ್ಚಿನ ಯುದ್ಧವು ಚೀನಾ ಭಾಗದ ಮೇಲೆ ನಿಂತಿದೆ—ಉತ್ತರ ವಿಯೆಟ್ನಾಂಗೆ ಶಸ್ತ್ರಾಸ್ತ್ರ ಬಂದರಾಜೆಲ್ಲಾ ಚೀನಾದ್ದಾಗಿದೆ

★

ಕೊಯಮತ್ತೂರು— ಪರಿವಾರಕ್ಕೆ ಆನಂದ ಸಂಚಾರಕ್ಕೆ ಹೋಗಿ ವಾಪಸ್ಸು ಬರುತ್ತಿದ್ದ ಕಂಡಿವಿದ್ದ ಕಾರು ವಿದ್ಯುತ್ ಕಂಬಕ್ಕೆ ಡಿಕ್ಕಿಯು ಅಡ್ಡ ಗೋಡೆಗೆ ಡಿಕ್ಕಿ ಹೊಡಿದು ಕಳಗುರುಳಿತು ; ಕೂಡಲೇ ಒಬ್ಬ ಸತ್ತು 6 ಮಂದಿ ತೀವ್ರ ಗಾಯಗೊಂಡರು.

ಕೊಲಂಬೊ— ವಿದೇಶೀ ಪ್ರವಾಸದ ನಿರ್ಬಂಧವನ್ನು ಸ್ವಲ್ಪ ಸಡಿಲಿಸಲಾಗಿದೆ.

ಪ್ರಶಂಸನೀಯ ಕಾರ್ಯ

ಮದರಾಸು— ಮಿಂಟೂರೋಡಿನಲ್ಲಿ ಹಿಂದು ನಿಕಸ್ಮಿಕಕ್ಕೆ ನೊನ್ನೆ ಸಿಕ್ಕಿ ಬಿದ್ದ ಮಡುವಿನಲ್ಲಿ ಬಿದ್ದಿದ್ದ ಇಬ್ಬರನ್ನು ನೂರಾರು ಮಂದಿ ಡಾರಿಹೋಕರು ನೋಡುತ್ತಾ ಹೋಗುತ್ತಿದ್ದರೂ, ಮಧ್ಯರಾತ್ರಿ ಕೂಲಿ ಹೆಂಗಸು ಲಕ್ಷ್ಮಿ ಮನಕಂಗಿ ಕರುಣೆಯಿಂದ ಅವರನ್ನು ಟ್ಯಾಕ್ಸಿಯಲ್ಲಿ ಆಸ್ಪತ್ರೆಗೆ ಸಾಗಿಸಿದಳು ; ಈ ಸ್ತುತ್ಯ ಕಾರ್ಯಕ್ಕಾಗಿ ನಿನ್ನೆ ಟ್ರಾಫಿಕ್ ಮುಖ್ಯ ಕಛೇರಿಯಲ್ಲಿ ಸುಳ ಸವಾರಂಭದಲ್ಲಿ ಆಕೆಗೆ ಪೋಲೀಸರು ಪಾರಿತೋಷಕವನ್ನಿತ್ತು ಏರ್ಪಾಡಿಸಿದ್ದರು.

ಪ್ರಧಾನಿಗಳ ಹಂಟಿ ಹೇಳಿಕೆ

ಲಿವರ್‌ಗ್ರಾಡ್— ಶಾಸ್ತ್ರಿಯವರ ಹಿಜ್ರ ಹಂಟಿ ಹೇಳಿಕೆಯಲ್ಲಿ ಪಾಕಿಸ್ತಾನವು ಕಚ್ಛ್‌ನ ರಾಣ್‌ನಲ್ಲಿ ಮಾಡಿರುವ ಆಕ್ರಮಣದ ಬಗ್ಗೆ ನೇರ ಅನ್ವಯವಿರುವ ಸಾಧ್ಯತೆ ಕಡಮೆಯಾದರೂ ಈ ವಿಷಯದಲ್ಲಿ ರಷ್ಯವು ಪಾಕಿಸ್ತಾನದ ಮೇಲೆ ಒತ್ತಡ ಹಾಕಬಹುದೆಂದು ಹೇಳಲಾಗಿದೆ.

ಪಾಳೆಯುಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಪೇಕ್ಷ, ಜ್ಯೋತಿರ್ವಿದ್ವನ್ಮಣಿ
ಪಂಪಕ್ಕೃಷ್ಣಜೋಯಿಸರಿಂದ

ಶಾ. ಗಂ. ವಾರ ಪಂಚಮಿ ಉತ್ತರಾಷಾಢ

ವಹಡಿ ವೆಟ್ಟಲುಗಳೇ ರಂಗಮಂದಿರ

ಸ್ವಟಗಾರ್ಟ್ (ಡಾಹ್ (— ಸುವಾರು ೫ ರಿಂದ 14 ನೇ ಶತಮಾನದ ನಡುವಣ ಕಾಲದಲ್ಲಿ ಪಶ್ಚಿಮ ಜರ್ಮನಿಯ ಸ್ವಾಬಿಷ್ ಹಾಲ್ ಎಂಬ ನಗರದಲ್ಲಿ ನಿರ್ಮಿಸಲಾದ ಮೈಕೇಲ ದೇವಾಲಯದ ಸಂಬಂಧವಾದ ವೆಟ್ಟಲುಗಳು ಎಂದಿನಿಂದಲೂ ಅಗಾಧ ಪ್ರಶಂಸೆಗೊಳಗಾಗಿವೆ : ಉಪ್ಪಿನ ವ್ಯಾಪಾರಕ್ಕೆ ಪ್ರಸಿದ್ಧವಾದ ಈ ನಗರದ ಉಪ್ಪಿನ ವ್ಯಾಪಾರಿಗಳು ಈ ಹಿಂದೆಯೆಲ್ಲಾ ಈ ವೆಟ್ಟಲುಗಳ ಮೇಲೆ ಉಪ್ಪಿನ ವ್ಯಾಪಾರ ನಡೆಸುತ್ತಿದ್ದರು . ನಾಲ್ಕು ದಶಕಗಳ ಹಿಂದೆ ಇದನ್ನು ಬೈಲು ರಂಗಮಂದಿರವಾಗಿ ರೂಪಾಂತರಿಸಿಕೊಳ್ಳಲಾಯಿತು ; ಜರ್ಮನಿಯ ಪ್ರಖ್ಯಾತ ನಾಟಕ ಸಂಸ್ಥೆಗಳು ಪ್ರತಿ ವರುಷಕ್ಕಾಗಲಿಯೂ ಇಲ್ಲಿ ನಾಟಕೋತ್ಸವಗಳನ್ನು ನ್ನು ನಡೆಸುತ್ತವೆ : ಈ ವರ್ಷದ ನಾಟಕೋತ್ಸವವು ಜೂನ್ 26 ರಂದು ಆರಂಭವಾಗಿ ಆಗಸ್ಟ್ 21 ರಂದು ಮುಗಿಯಲಿವೆ. (ಯೂ ಪಿ ಎಸ್)

ಂ ಂ ಂ

ಜಗತ್ತಿನ ಏಕೈಕ ಗಣಿ ವಸ್ತುಸಂಗ್ರಹಾಲಯ

ಬೋಚಂ (ಡಾಡ್) — ಇಡೀ ಜಗತ್ತಿನಲ್ಲಿ ಬೇರೆಲ್ಲೂ ಇಲ್ಲದ ಗಣಿ ಮ್ಯೂಸಿಯಂ ಒಂದನ್ನು ಜರ್ಮನಿಯ ರೂಂ ಪ್ರದೇಶದ ಬೋಚಂನಲ್ಲಿದೆ ; 30 ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟ ಈ ಮ್ಯೂಸಿಯಂ ಗಣಿ ಕೆಲಸವು ಜಗತ್ತಿನಲ್ಲಿ ಆರಂಭವಾದಾಗಿನಿಂದ ಇಂದಿನವರೆಗೆ ಅದುಲ್ಲಿ ಕಾಣಲಾಗಿರುವ ಪ್ರಗತಿಯನ್ನು ಹಾಗೆಯೇ ಕಣ್ಣಿನ ಮುಂದೆ ತಂದು ನಿಲ್ಲಿಸುವಂತಿದೆ : ಭೂಮಿತಲೇ ಆದಿಯಾಗಿ ಹಲವಾರು ದೇಶಗಳಿಂದ ಸುಮಾರು 9300 ಗಣಿ ಪರಿಣಿತರು ಬಂದಿದ್ದು ಇದನ್ನು ಸಂದರ್ಶಿಸಿದ್ದಾರೆ ; ಉಕ್ಕಿನ ತೆರೆಯಾಚೆಯ ದೇಶಗಳಿಂದಲೂ ಸಂದರ್ಶಕರು ಇಲ್ಲಿಗೆ ಬಂದಿದ್ದು ಇದನ್ನು ಅತಿಶಯವಾಗಿದೆಯೆಂದು ಮೆಚ್ಚಿಕೊಂಡಿದ್ದಾರೆ (ಯೂ ಪಿ ಎಸ್

ಂ ಂ ಂ

ಜರ್ಮನಿಯಿಂದ ಹಿಂದಿಯಲ್ಲಿ ಚಾನಲಿ ಪ್ರಸಾರ

—0—

ಕೊಲೋನ್ನು (ಡಾಡ್) — ಜಗತ್ತಿನ ಐದು ಖಂಡಗಳಿಗೂ ಸಂಗೀತ, ಸುದ್ದಿಗಳನ್ನು ಪ್ರಸಾರ ಮಾಡುವ ಡಷ್‌ವೆಲ್ ಎಂಬ ಸುದ್ದಿ ಪ್ರಸಾರ ಕೇಂದ್ರವು ತನ್ನ ಪ್ರಸಾರವನ್ನು ಇನ್ನೂ ವಿಸ್ತರಿಸಲಿದೆ : ಇದು ಬೇರೆಬೇರೆ ಕೇಂದ್ರಗಳಿಂದ 26 ವಿವಿಧ ಭಾಷೆಗಳಲ್ಲಿ ದಿನವೊಂದಕ್ಕೆ 62 ಗಂಟೆಗಳಷ್ಟು ಪ್ರಸಾರ ಮಾಡುತ್ತಿದೆ ; ಇದುವರೆಗೆ ಜರ್ಮನ್ ಭಾಷೆಯಲ್ಲಿ ಪ್ರಸಾರ ಮಾಡುತ್ತಿದ್ದುದನ್ನು 9 ರಿಂದ 7 ಗಂಟೆಗೆ ಇಳಿಸಲಾಗಿದೆ ; ಹಿಂದಿ, ಇಂಡೋನೇಷಿಯನ್ ಮತ್ತು ಉರ್ದು ಭಾಷೆಗಳ ಪ್ರಸಾರವನ್ನು 35 ರಿಂದ 40 ನಿಮಿಷಗಳಿಗೇರಿಸಲಾಗಿದೆ (ಯೂ ಪಿ ಎಸ್)



(ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಬರಲಿ)

ವುಡ್‌ಲ್ಯಾಂಡ್ಸ್ ಅಪೋಘ 2 ನೇ ವಾರ

ಶರಾಬಿ (ಹಿಂದಿ) Sharabi

ಪಾತ್ರ— ದೇವಾನಂದ್, ಮಧುಬಾಲ, ಲಲಿತ ಪವಾರ್, ಮುಂತಾದವರು

ಸಂಗೀತ : ಮದನಮೋಹನ್ — ಡೈರೆಕ್ಷನ್ ; ರಾಜ್ ಖೋಸ್ಲ

ಪ್ರತಿದಿನ 3 ಪ್ರದರ್ಶನಗಳು

ಅಪೆರಾ— ಜನಪ್ರಿಯ 3 ನೇ ವಾರ

ಅಮೋಘ ಕನ್ನಡ ಚಿತ್ರ — ದಿನ 3 ಆಟಗಳು

ಸರ್ವಜ್ಞಮೂರ್ತಿ [ಕನ್ನಡ]

ಪಾತ್ರ— ರಾಜಕುಮಾರ್, ಉದಯಕುಮಾರ್, ಹರಣ, ವೈನಾವತಿ, ಬಾಲಕೃಷ್ಣ

SHAKTI

SUDHA

A Superb Tonic

Help The Gorakshana

“ಗೋರಕ್ಷಣ” ಕ್ಕೆ ಚಂಬಲಿಗರಿಂದ

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ, ವಾಣಿಜ್ಯ, ಶಾಲೇಹಾಳ್ ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ್ಕ ಪ್ರಚಾರ್ಯಪೂರ್ಣಪತ್ರಿಕೆ.

ವಾರ್ಷಿಕ ಚಂದಾ 30 ಪೈಸೆ ‘ಗೋರಕ್ಷಣ’ ಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

Edited, Printed & Published by the Proprietor
Dharma Prachara Nirata M S Krishna Rao
at the Satyavadi Press Camarajapuram Mysore 4